ಉದಯವಾಣಿ

**Dated, Saturday, 01st July– 2017** **Pg.No.04**


# ■ ಇಂದು ವೈದ್ಯರ ದಿನಾಚರಣೆ

**ಕೋಲಾರ:** ಶ್ರೀದೇವರಾಜ್ ಅರಸ್ ವೈದ್ಯಕೀಯ ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಸಂಘದ ವತಿಯಿಂದ ಶನಿವಾರ ಮಧ್ಯಾಹ್ನ 2.30 ಗಂಟೆಗೆ ಕಾಲೇಜಿನ ಆವರಣದಲ್ಲಿ ವೈದ್ಯರ ದಿನಾಚರಣೆಯನ್ನು ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ವೈದ್ಯ, ಕ್ಷಕಿರಣ ತಜ್ಞೆ ಡಾ.ರಾಜೇಶ್ವರಿ ಅವರನ್ನು ಸಂಘದ ವತಿಯಿಂದ ಸನ್ಮಾನಿಸಲಾಗುವುದು. ಶ್ರೀದೇವರಾಜ್ ಅರಸ್ ವೈದ್ಯಕೀಯ ಕಾಲೇಜಿನ ಹಳೆಯ ವಿದ್ಯಾರ್ಥಿಗಳು, ಸದಸ್ಯರು ತಪ್ಪದೇ ಹಾಜರಾಗಬೇಕೆಂದು ಕೋರಲಾಗಿದೆ.

## ಅರಸು ಕಾಲೇಜಿನಲ್ಲಿ ವೈದ್ಯರ ದಿನಾಚರಣೆ

ಕೋಲಾರ ಜು ೧

ನಗರದ ಹೊರವಲಯದ ಟಮಕದ ಶ್ರೀ ದೇವರಾಜ್ ಅರಸ್ ವೈದ್ಯಕೀಯ ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಸಂಘದ ವತಿಯಿಂದ ಇಂದು ಮಧ್ಯಾಹ್ನ ೨-೩೦ ಘಂಟೆಗೆ ಕಾಲೇಜಿನ ಆವರಣದಲ್ಲಿ ವೈದ್ಯರ ದಿನಾಚರಣೆಯನ್ನು ಆಯೋಜಿಸಿದ್ದಾರೆ.

ಪ್ರಖ್ಯಾತ ವೈದ್ಯರಾದ ಕ್ಷಕಿರಣ ತಜ್ಞೆ ಡಾ॥ ರಾಜೇಶ್ವರಿ ಅವರನ್ನು ಸಂಘದ ವತಿಯಿಂದ ಸನ್ಮಾನಿಸಲಾಗುವುದು.

ಕೋಲಾರ ಪ್ರಭ



# ಇಂದು ವೈದ್ಯರ ದಿನ ಆಚರಣೆ

ಕೋಲಾರ : ಶ್ರೀ ದೇವರಾಜ್ ಅರಸ್ ವೈದ್ಯಕೀಯ ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಸಂಘದ ವತಿಯಿಂದ ಜು, 1ರ ಶನಿವಾರ ಮಧ್ಯಾಹ್ನ 2-30 ಗಂಟೆಗೆ ಕಾಲೇಜಿನ ಆವರಣದಲ್ಲಿ ವೈದ್ಯರ ದಿನಾಚರಣೆಯನ್ನು ಆಯೋಜಿಸಿದ್ದಾರೆ.

ಕಾರ್ಯಕ್ರಮದಲ್ಲಿ ಪ್ರಖ್ಯಾತ ವೈದ್ಯರಾದ ಕ್ಷಕಿರಣ ತಜ್ಞೆ ಡಾ.ರಾಜೇಶ್ವರಿ ರವರನ್ನು, ಸಂಘದ ವತಿಯಿಂದ ಸನ್ಮಾನಿಸಲಾಗುವುದು.

ಶ್ರೀ ದೇವರಾಜ್ ಅರಸ್ ವೈದ್ಯಕೀಯ ಕಾಲೇಜಿನ ಹಳೆಯ ವಿದ್ಯಾರ್ಥಿಗಳು, ಸದಸ್ಯರುಗಳು ತಪ್ಪದೆ ಹಾಜರಾಗುವಂತೆ ಕೋರಿದೆ.

ಕನ್ನಡಪ್ರಭ



**ಬೇಗ ಸಿಗುತ್ತೆ** ನ್ಯಾಕ್ ಏಕಸ್ವಾಮ್ಯಕ್ಕೆ ಧಕ್ಕೆ

# ವಿಶ್ವವಿದ್ಯಾಲಯಗಳಿಗೆ ಇನ್ನು ಖಾಸಗಿ ಕಂಪನಿಗಳಿಂದ ಮಾನ್ಯತೆ!



ನವದೆಹಲಿ: ಕಾಲೇಜು, ಇತರೆ ಅಧ್ಯಯನ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳಿಗೆ ಮಾನ್ಯತೆ ನೀಡುವ ನ್ಯಾಕ್‌ನ ಏಕಸ್ವಾಮ್ಯ ಅಧಿಕಾರ ಶೀಘ್ರ ಕಳಚಲಿದೆ. ಅಧ್ಯಯನ ಸಂಸ್ಥೆಗಳಿಗೆ ಮಾನ್ಯತೆ ನೀಡುವ ಅಧಿಕಾರ ಖಾಸಗಿ ಕಂಪನಿಗಳು ಸಹ ಪಡೆಯಲಿವೆ. ಪ್ರಸ್ತುತ ವಿಶ್ವವಿದ್ಯಾಲಯಗಳ ಅನುದಾನ ಆಯೋಗದ ಪ್ರಕಾರ ವಿಶ್ವ ವಿದ್ಯಾಲಯ ಮತ್ತು ಕಾಲೇಜುಗಳಿಗೆ ನ್ಯಾಕ್(ರಾಷ್ಟ್ರೀಯ ಮರು ಮೌಲ್ಯೀಕರಣ ಮತ್ತು ಮಾನ್ಯತೆ ಮಂಡಳಿ) ಮಾತ್ರವೇ ಮಾನ್ಯತೆ ನೀಡಬಹುದಾಗಿದೆ.

ವಿದ್ಯಾಸಂಸ್ಥೆಗಳಿಗೆ ನೀಡಲಾಗುವ ಮಾನ್ಯತೆ ವಿಚಾರದಲ್ಲಿ ಪಾರದರ್ಶಕತೆ ಮತ್ತು ನ್ಯಾಕ್‌ನ ಏಕಸ್ವಾಮ್ಯತೆ ಕೊನೆಗಾಣಿಸಲು ಈ ನಿರ್ಧಾರ ಕೈಗೊಳ್ಳಲಾಗಿದೆ.

ಸರ್ಕಾರದ ಚಿಂತಕ ಸಂಸ್ಥೆಯಾಗಿರುವ ನೀತಿ ಆಯೋಗ ಇತ್ತೀಚೆಗಷ್ಟೇ, ವಿಶ್ವವಿದ್ಯಾಲಯಗಳಿಗೆ ಮಾನ್ಯತೆ ನೀಡುವ ಅಧಿಕಾರವನ್ನು ಕೆಲ ಖ್ಯಾತ ಖಾಸಗಿ ಕಂಪನಿಗಳಿಗೆ ನೀಡುವಂತೆ ಮಾನವ ಸಂಪನ್ಮೂಲಗಳ ಅಭಿವೃದ್ಧಿ ಸಚಿವಾಲಯಕ್ಕೆ ಸೂಚಿಸಿತ್ತು.